# ಜಗಳಗಂಟಿ ಮರ

■ ವಿನು ಗಂಗೆ

ಜಗಳಗಂಟಿ! ಹೀಗೊಂದು ಹೆಸರಿನ ಮರ ಇದೆ ಎನ್ನುವುದೇ ನನ್ನನ್ನು ಪುಳಕಿತಗೊಳಿಸಿತ್ತು. ನಮ್ಮ ತೋಟದ ಪಕ್ಕದ ಏರಿಯ, ದಾರಿ ಬದಿಯ ಸಾಧಾರಣ ಎತ್ತರದ ಈ ಮರ ಯಾಕೆ ಜಗಳಗಂಟಿ ಎನಿಸಿಕೊಂಡಿದೆ ಅಂತ ಅರಸಿ ಹೊರಟೆ.

ಯಾರೂ ಇದರ ಕಟ್ಟಿಗೆಯಲ್ಲಿ ಒಲೆ ಉರಿಸುವುದಿಲ್ಲ. ಮನೆಗೆ ಇದರ ಪೀಠೋಪಕರಣ ಬಳಸುವುದಿಲ್ಲ. ಇದರ ಒಂದು ತುಂಡು ಮನೆಯಲ್ಲಿ ಇದ್ದರೆ ಜಗಳಗಳಾಗುತ್ತವೆ ಎಂಬ ನಂಬಿಕೆ. ಅಷ್ಟೇ ಅಲ್ಲ, ಜಗಳಗಂಟಿ ಎಂಬ ವಾದಕ್ಕೆ ಪುಷ್ಟಿ ಕೊಡಲು ಸುಂದರ ಜನಪದ ಕಥೆಯೂ ಇದೆ. ಅದು ಹೀಗಿದೆ:

ಒಂದು ಊರಿನಲ್ಲಿ ಇಬ್ಬರು ಅಣ್ಣ–ತಮ್ಮ ಅಕ್ಕಪಕ್ಕದ ಮನೆಯಲ್ಲಿ ಇದ್ದರಂತೆ. ಅನ್ಯೋನ್ಯವಾಗಿದ್ದ ಅವರು ಒಂದು ಸಲ ಎಳ್ಳು ಬೆಳೆಯೋಣ ಎಂದು ನಿರ್ಧರಿಸಿ ಬೆಳೆದರಂತೆ. ಫಸಲು ಬಂದಾಗ ಎಳ್ಳು ಮಾರಲು ಒಳ್ಳೆಯ ಬೆಲೆ ಇರಲಿಲ್ಲ. ಹಾಗಾಗಿ ಅವರು ಎಳ್ಳನ್ನು ಈಗ ಮಾರುವುದು ಬೇಡ ಎಂದು ಮನೆಯಲ್ಲಿ ಇಟ್ಟರಂತೆ. ಅಣ್ಣನ ಹೆಂಡತಿ ಈ ಜಗಳಗಂಟಿ ಮರದ ಕಟ್ಟಿಗೆ ತಂದು ಒಲೆ ಉರಿಸಿ ಅಡುಗೆ ಮಾಡುತ್ತಿದ್ದಳಂತೆ. ದಿನಾಲೂ ಅದು ಉರಿಯುವಾಗ ಎಳ್ಳು ಹುರಿದಂತೆ ಚಟಪಟ ಸದ್ದಾಗುವುದು ಕೇಳಿದ ತಮ್ಮನ ಹೆಂಡತಿ, 'ಓಹೋ, ನನ್ನ ವಾರಗಿತ್ತಿ ಎಳ್ಳು ಹುರಿಯುತ್ತಿದ್ದಾಳೆ' ಎಂದು ಭಾವಿಸಿ, ತಾನೂ ದಿನಾಲೂ ಎಳ್ಳು ಹುರಿದು ಉಂಡೆ ಮಾಡಿ ತಿಂದು ಎಳ್ಳು ಪೂರ್ತಿ ಖಾಲಿ ಮಾಡಿದಳಂತೆ. ಒಂದು ದಿನ ಎಳ್ಳಿಗೆ ಒಳ್ಳೆಯ ಬೆಲೆ ಬಂದು ಅಣ್ಣ–ತಮ್ಮ ಮಾರಲು ನಿರ್ಧರಿಸಿದರು. ಆಗ ಅಣ್ಣನ ಮನೆಯಲ್ಲಿ ಮಾತ್ರ ಎಳ್ಳು ಇದೆ, ತಮ್ಮನ ಮನೆಯ ಎಳ್ಳು ಪೂರಾ ಖಾಲಿ! ಜಗಳ ಆಡಲು ಮತ್ತೇನು ಕಾರಣ ಬೇಕು? ಅಂದಿನಿಂದ ಅಣ್ಣ ತಮ್ಮಂದಿರ ಮನೆಯಲ್ಲಿ ಜಗಳ. ಇದಕ್ಕೆ ಮೂಲ ಕಾರಣವಾದ ಮರಕ್ಕೆ ಜಗಳಗಂಟಿ ಹಣೆಪಟ್ಟಿ. ಈ ಕಥೆ





ಎಷ್ಟು ಜನಜನಿತವಾಗಿದೆ ಎಂದರೆ, ಈ ಮರದ ತಂಟೆಗೆ ಯಾರೂ ಹೋಗುವುದಿಲ್ಲ.

ನಮಗೆ ಒಬ್ಬರ ಮೇಲೊಬ್ಬರು ಜಗಳವಾಡಲು ಬೇಕಾದಷ್ಟು ಕಾರಣ ಸಿಗುವುದರಿಂದ ಒಂದು ಮರದ ಇರುವಿಕೆ ಜಗಳಕ್ಕೆ ಕಾರಣ ಹೇಗಾಗುತ್ತದೆ ಎಂದು ಮೇಲ್ನೋಟಕ್ಕೆ ಅನ್ನಿಸಿದರೂ, ನಂತರ ಯೋಚಿಸಿದರೆ ಈ ಮರದ ಉಳಿವು ಯಾವುದೋ ಕಾರಣಕ್ಕೆ ಅಗತ್ಯ ಇರಬೇಕು ಅನಿಸುತ್ತದೆ. ಹೇಗಾದರೂ ಸರಿ ಮಾನವನ ಹಸ್ತಕ್ಷೇಪ ತಡೆದು ಜೀವಕೊಂಡಿಯ ರಕ್ಷಣೆಗಾಗಿ ಇಂತಹ ಜನಪದ ಕಥೆಗಳ ಸೃಷ್ಟಿಯಾಗಿರಬಹುದು. ನಮ್ಮ ಅರಿವಿಗೆ ಜಗಳಗಂಟಿಯ ಇರುವಿಕೆ ಮಹತ್ವ ಬರುವ ಮುನ್ನ ಅದರಿಂದ ನಾವು ದೂರ ಬಂದಿದ್ದೇವೆ.

ಜಂಗಳಗಂಟಿ ಮರಕ್ಕೆ ಹಸಿರುಗಣೆ ಮರ, ಬಲಗಣೆ ಮರ ಎನ್ನುವ ಹೆಸರುಗಳೂ ಇವೆ. ಹಿಂದೆ ಹೇಳಿದ ತುಂಬುರು ಮರದ ಹತ್ತಿರದ ಸಂಬಂಧಿ ಇದು. ಶಾಸ್ತ್ರೀಯ ಹೆಸರು **Diospyros montana.** ತುಂಬುರಿನ ಕೆಲವು ಗುಣಗಳು ಇದರಲ್ಲೂ ಕಾಣುತ್ತದೆ. ಬೆಂಕಿಗೆ ಇದರ ಕಟ್ಟಿಗೆ ಹಾಕಿದರೆ ಚಟಪಟ ಕಿಡಿ ಹಾರುವ ಸದ್ದಾಗುತ್ತದೆ. ಮರವೂ ಅಂಕುಡೊಂಕು. ತುಂಬುರಿನಂತೆಯೇ ಹಣ್ಣು. ಆದರೆ ತಿನ್ನಲು ಬರುವುದಿಲ್ಲ, ಗಾತ್ರ ಕೂಡ ಚಿಕ್ಕದು. ಇದರ ಕಾಯಿ ದಸರಾ ಕಾಲದಲ್ಲಿ ಹಣ್ಣಾಗುತ್ತದೆ. ಬೀಜಗಳಿಂದ ಸುಲಭವಾಗಿ ಸಸಿಯಾಗುತ್ತದೆ. ನಮ್ಮ ತೋಟದ ಏರಿ ಬದಿಯಲ್ಲಿ ಈಗ ಚಿಕ್ಕ ಚಿಕ್ಕ ಜಗಳಗಂಟಿಯರದೇ ತಗಾದೆ.

ಜಗಳಗಂಟಿ, ಯಾರೂ ಅದರ ತಂಟೆಗೆ ಹೋಗದಂತೆ ಜಗಳಗಂಟಿಯೇ ಆಗಿರಲಿ. ಜಗಳಗಂಟಿ ಕಥೆ ಮಕ್ಕಳಿಗೆ ಹೇಳಿ. ಹಸಿರು ಜಗಳಗಂಟಿಯರ ಸಂತತಿ ಮುಂದುವರಿಯುತ್ತಿರಲಿ.

ಪ್ರತಿಕ್ರಿಯಿಸಿ: feedback@sudha.co.in


